ನೋಡಿದೊಡನೆಯೇ ಆತಂಕ ಮಾಯವಾಗಿತ್ತು. ಅವರಿಗಾಗಿ ಟ್ಯಾಕ್ಸಿ ಬಂದಿತ್ತು. ಅದನ್ನು ಹತ್ತಿ ತಮಗಾಗಿ ಕಾದಿರಿಸಿದ್ದ ಹೋಟೆಲ್ ತಲುಪಿದ ದೇವರಾಜುಗೆ ವಿದೇಶವನ್ನು ಮೊದಲ ಬಾರಿಗೆ ಸಂದರ್ಶಿಸುತ್ತಿದ್ದ ಅಳುಕು ಮಾಯವಾಗಿತ್ತು. ಸ್ನಾನ ಮಾಡಿ ಮಲಗಿ ನಿದ್ರೆ ಮಾಡುವಾಗ ತಾನಿದ್ದುದು ವಿದೇಶದಲ್ಲಿ ಎಂಬ ನೆನಪೇ ಇರಲಿಲ್ಲ. ಬೆಳಗಾಗುತ್ತಲೇ ಪತ್ನಿ ಜಾನಕಿಗೆ 'ಸುಖವಾಗಿ ತಲುಪಿದೆ. ಯಾವುದೇ ರೀತಿಯ ತೊಂದರೆಯಾಗಿಲ್ಲ. ಸಂಜೆ ಸಮಯ ನೋಡಿಕೊಂಡು ಮಾತಾಡುವೆ' ಎಂದು ಮೆಸೇಜು ಮಾಡಿದರು.

ಸ್ನಾನ ಮಾಡಿ ಉಪಹಾರ ಮುಗಿಸಿ ರೂಮಿಗೆ ಮರಳಿದಾಗ ಟ್ಯಾಕ್ಸಿ ಡ್ರೈವರ್ ಬಂದು ರೂಮಿನ ಬಾಗಿಲು ಬಡಿದ. ಅಲ್ಲಿಂದ ಮೂರು ತಿಂಗಳ ಸಮಯ ಹೇಗೆ ಕಳೆಯಿತು ಎನ್ನುವುದೇ ಗೊತ್ತಾಗಲಿಲ್ಲ ದೇವರಾಜುಗೆ. ಬೆಳಗ್ಗೆ ಎಂಟಕ್ಕೆ ಗ್ರಾಹಕ ಕಂಪೆನಿಗೆ ಹೋಗಿ ತಮ್ಮ ಕಂಪೆನಿಯವರು ಕಳಿಸಿದ ಮಷಿನ್ನಿನ ಜೋಡಣೆಯ ಉಸ್ತುವಾರಿ ಮಾಡುತ್ತಿದ್ದರು. ಮತ್ತೆ ಸಂಜೆ ಏಳಕ್ಕೆ ರೂಮು. ಶನಿವಾರ ಮತ್ತು ಭಾನುವಾರ ಶಾಪಿಂಗ್. ವಾಪಸ್ಸು ಬರುವಾಗ ಏನೇನು ತರಬೇಕೆಂದು ಮಡದಿ ಆಗಲೇ ಒಂದು ಸಣ್ಣ ಪಟ್ಟಿ ಕಳಿಸಿದ್ದಳು. ಒಮ್ಮೊಮ್ಮೆ ಕಂಪೆನಿಯವರು ಭಾನುವಾರ ಎಲ್ಲಿಗಾದರೂ ಪ್ರವಾಸಕ್ಕೆ ಕರೆದೊಯ್ಯುತ್ತಿದ್ದರು. ಅದು ಕಂಪೆನಿಯವರು ತಮ್ಮ ಜೊತೆ ವ್ಯವಹರಿಸುವವರಿಗೆ ತೋರುವ ಗೌರವ ಮತ್ತು ಔದಾರ್ಯ. ಆ ಕಂಪೆನಿಯವರು ಬೆಂಗಳೂರಿನ ತನ್ನ ಕಾರ್ಖಾನೆಗೆ ಬಂದಾಗ ದೇವರಾಜು ಕೂಡ ಅವರನ್ನು ಪ್ರವಾಸಿ ತಾಣಗಳಿಗೆ ಕರೆದುಕೊಂಡು ಹೋಗಿದ್ದರು. ಒಂದೆರಡು ಬಾರಿ ಪ್ರತಿಷ್ಠಿತ ರೆಸ್ಟೋರೆಂಟ್‌ಗಳಲ್ಲಿ ಊಟಕ್ಕೂ ಏರ್ಪಾಟು ಮಾಡಿದ್ದರು.

ಪ್ರಯಾಣಿಕರೆಲ್ಲರೂ ಸೀಟ್ ಬೆಲ್ಟ್ ಹಾಕಿರುವುದನ್ನು ಗಗನಸಖಿ ಖಾತ್ರಿಪಡಿಸಿಕೊಂಡು ಮುಂದೆ ಸಾಗಿದಳು. ದೇವರಾಜು ತಾವು ಸೀಟ್ ಬೆಲ್ಟ್ ಹಾಕಿರುವುದನ್ನು ಮುಟ್ಟಿ ಖಾತ್ರಿ ಮಾಡಿಕೊಂಡರು.

ವಿಮಾನದ ಚಲನೆ ಶುರುವಾಯಿತು. ಮೊದಲು ದಡದಡನೆ ನೆಲದ ಮೇಲೆ ಚಲಿಸುತ್ತಾ ಕ್ರಮೇಣ ವೇಗ ಹೆಚ್ಚಿಸಿಕೊಂಡು ಕೆಲವು ನಿಮಿಷಗಳಲ್ಲಿ ಅದು ನೆಲ ಬಿಟ್ಟು ಗಗನಕ್ಕೆ ಹಾರಿದ್ದು ಉಯ್ಯಾಲೆಯಲ್ಲಿ ಮೇಲಕ್ಕೆ ಜೀಕಿದ ಅನುಭವ ಕೊಟ್ಟಿತ್ತು! ಕೆಲ ನಿಮಿಷಗಳಲ್ಲೇ ವಿಮಾನ ಮೋಡಗಳ ಮೇಲೆ ಹಾರುತ್ತಿತ್ತು!

ಭಾರತದಿಂದ ಬರುವಾಗ ಅವರ ಸೀಟಿನ ಪಕ್ಕದ ಕಿಟಕಿಯಿಂದ ನೋಡಿದರೆ ವಿಮಾನದ ಬೃಹತ್ ರೆಕ್ಕೆಗಳು ಮಾತ್ರ ಕಾಣುತ್ತಿದ್ದವು. ಈ ಸಲ ಸೀಟು ವಿಮಾನದ ರೆಕ್ಕೆಯಿಂದ ದೂರವಿದ್ದು ಕೆಳಗಿನ ದೃಶ್ಯ ಕಾಣುತ್ತಿತ್ತು. ವಿಮಾನ ಮೇಲಕ್ಕೆ ಏರುವಾಗ ಕಂಡ ಫ್ರಾಂಕ್‌ಫರ್ಟ್ ನಗರ ಮರೆಯಾಗಿ ಇದೀಗ ಬರಿಯ ಮೋಡಗಳು ಮಾತ್ರ ಕೆಳಗೆ ಕಾಣಿಸುತ್ತಿದ್ದವು. ದೇವರಾಜುಗೆ ಚಿಕ್ಕಂದಿನಲ್ಲಿ ಕಂಡ ಪೌರಾಣಿಕ ಸಿನಿಮಾಗಳ ನೆನಪಾಯಿತು! ಆಗದು ಅದ್ಭುತವಾದ ಕಲ್ಪನೆಯನ್ನು ಹುಟ್ಟು ಹಾಕಿತ್ತು! ಈಗದು ಸಾಮಾನ್ಯ ಎನಿಸಿಬಿಟ್ಟಿತು.

ನಿರ್ದಿಷ್ಟ ಎತ್ತರ ತಲುಪಿದ ಮೇಲೆ ವಿಮಾನ ನಿಜಕ್ಕೂ ಚಲಿಸುತ್ತಿದೆಯೆ ಎನ್ನುವ ಅನುಮಾನ ದೇವರಾಜುಗೆ! ಅದು ನಿಂತಲ್ಲಿಯೇ ನಿಂತಿದೆ ಎನ್ನುವ ಭಾವನೆ! ಬಸ್ಸು, ಕಾರು, ರೈಲಿನಲ್ಲಿ ಪ್ರಯಾಣಿಸುವಾಗ ಸುತ್ತಲಿನ ವಸ್ತುಗಳು ಹಿಂದಕ್ಕೆ ಹೋಗುತ್ತಿರುವುದು ಕಾಣುವುದರಿಂದ ನಾವು ಮುಂದೆ ಹೋಗುತ್ತಿದ್ದೇವೆ ಎನ್ನುವ ಭಾವನೆ ಬರುತ್ತದೆ. ಆದರೆ, ವಿಮಾನದಲ್ಲಿ ಮೋಡದ ಎತ್ತರವನ್ನೂ ಮೀರಿ ಮೇಲೆ ಹೋದಾಗ ಅಲ್ಲಿ ನೀಲಿ ಆಗಸ ಬಿಟ್ಟರೆ ಬೇರೇನೂ